## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 201 |
| ಸದಸ್ಯರ ಹೆಸರು | ಶ್ರೀ ಐವನ್ ಡಿ ಸೋಜಾ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 12.08.2025 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಕರಾವಳಿ ಭಾಗದ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕೆಂಪು ಕಲ್ಲು ಮತ್ತು ಮರಳಿನ ತೀವ್ರ ಅಭಾವ ಉಂಟಾಗಿದ್ದು, ಕೂಲಿ ಕಾರ್ಮಿಕರು ಮರಳು ಮತ್ತು ಕೆಂಪು ಕಲ್ಲು ಸಿಗದೇ ಎಲ್ಲಾ ಕಾಮಗಾರಿಗಳು ಸ್ಥಗಿತಗೊಂಡಿರುವುದ ರಿಂದ ಉಂಟಾದ ತೊಂದರೆಯನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಂಪು ಕಲ್ಲು ಮತ್ತು ಮರಳು ಪೂರೈಕೆಗಾಗಿ ಈ ಕೆಳಕಂಡಂತೆ ಕ್ರಮ ವಹಿಸಲಾಗಿದೆ.<br>➢ ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಕಟ್ಟಡ ಕಲ್ಲು ಗಣಿಗಾರಿಕೆಗೆ 108 ಗುತ್ತಿಗೆಗಳನ್ನು ಮಂಜೂರು ಮಾಡಲಾಗಿದ್ದು, ಪ್ರಸ್ತುತ ಚಾಲ್ತಿಯಲ್ಲಿರುತ್ತವೆ.<br>➢ ಸದರಿ ಕಲ್ಲುಗಣಿ ಗುತ್ತಿಗೆಗಳ ಪರಿಸರ ಅನುಮತಿ ಪತ್ರ ದಲ್ಲಿನ ವಾರ್ಷಿಕ ಉಪಖನಿಜ ಉತ್ಪಾದನೆ ಪ್ರಮಾಣವು 56,45,659 ಮೆಟ್ರಿಕ್ ಟನ್ ಗಳಾಗಿರುತ್ತದೆ.<br>➢ ಸದರಿ ಕಟ್ಟಡ ಕಲ್ಲುಗಣಿ ಗುತ್ತಿಗೆಗಳಿಂದ 2024-25ನೇ ಸಾಲಿನಲ್ಲಿ 17,19,915 ಮೆಟ್ರಿಕ್ ಟನ್ ಮತ್ತು 2025-26ನೇ ಸಾಲಿನಲ್ಲಿ 3,93,928 ಮೆಟ್ರಿಕ ಟನ್ ಕಟ್ಟಡ ಕಲ್ಲನ್ನು ಉತ್ಪಾದಿಸಿ ಸಾಗಾಣಿಕೆ ಮಾಡಲಾಗಿರುತ್ತದೆ.<br>➢ ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಕೆಂಪು ಕಲ್ಲು ಗಣಿಗಾರಿಕೆಗೆ 19 ಗುತ್ತಿಗೆಗಳನ್ನು ಮಂಜೂರು ಮಾಡಲಾಗಿದ್ದು, ಪ್ರಸ್ತುತ ಚಾಲ್ತಿಯಲ್ಲಿರುತ್ತವೆ.<br>➢ ಸದರಿ ಗುತ್ತಿಗೆಗಳಿಂದ 2024-25ನೇ ಸಾಲಿನಲ್ಲಿ 1,14,539 ಮೆಟ್ರಿಕ್ ಟನ್ ಮತ್ತು 2025-26ನೇ ಸಾಲಿನಲ್ಲಿ 5,11,912 ಮೆಟ್ರಿಕ್ ಟನ್ ಕೆಂಪು ಕಲ್ಲನ್ನು ಉತ್ಪಾದಿಸಿ ಸಾಗಾಣಿಕೆ ಮಾಡಲಾಗಿರುತ್ತದೆ.<br>➢ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 3-A(a) ಮತ್ತು 3-A(b) ರಂತೆ ರಂತೆ ಪಟ್ಟಾ / ಖಾಸಗೀ ಜಮೀನುಗಳಲ್ಲಿ ಕೆಂಪುಕಲ್ಲು (ಲ್ಯಾಟರೈಟ್) ತೆರವುಗೊಳಿಸಲು 2024-25ನೇ ಸಾಲಿನಲ್ಲಿ ಕಾರ್ಯಾದೇಶ ನೀಡಿರುವ 25 ಪ್ರದೇಶಗಳಲ್ಲಿ 9659 ಮೆಟ್ರಿಕ್ ಟನ್ ಮತ್ತು 2025-26ನೇ ಸಾಲಿನಲ್ಲಿ ಕಾರ್ಯಾದೇಶ ನೀಡಿ, ಪ್ರಸ್ತುತ ಚಾಲ್ತಿಯಲ್ಲಿರುವ 11 ಪ್ರದೇಶಗಳಲ್ಲಿ 9975 ಮೆಟ್ರಿಕ್ ಟನ್ ಲ್ಯಾಟರೈಟ್ ಉತ್ಪಾದಿಸಿ ಸಾಗಾಣಿಕೆ ಮಾಡಲಾಗಿರುತ್ತದೆ.<br>➢ ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ನಿಯಂತ್ರಣ ಹೊರತುಪಡಿಸಿದ ವಲಯದ (Non- CRZ) ವ್ಯಾಪ್ತಿಯಲ್ಲಿ 27 ಮರಳು ಗಣಿ ಗುತ್ತಿಗೆಗಳನ್ನು ಟೆಂಡರ್ ಕಂ ಹರಾಜು ಮೂಲಕ ಮಂಜೂರು ಮಾಡಿದ್ದು, 05 ಮರಳು ಬ್ಲಾಕ್‌ಗಳನ್ನು ಸರ್ಕಾರಿ ಕಾಮಗಾರಿಗಳಿಗೆ ಮಂಜೂರು ಮಾಡಲಾಗಿರುತ್ತದೆ.<br>➢ ಸದರಿ 32 ಮರಳು ಬ್ಲಾಕ್‌ಗಳಿಂದ 7,19,936 ಮೆಟ್ರಿಕ್ ಟನ್ ಮರಳು ಗಣಿಗಾರಿಕೆಗೆ ಲಭ್ಯವಿದ್ದು, 2024-25ನೇ ಸಾಲಿನಲ್ಲಿ 74,846 ಮೆಟ್ರಿಕ್ ಟನ್ ಮರಳನ್ನು ಉತ್ಪಾದಿಸಿ ಸಾಗಾಣಿಕೆ ಮಾಡಲಾಗಿರುತ್ತದೆ.<br>➢ 2025-26ನೇ ಸಾಲಿನಲ್ಲಿ ಪ್ರಸ್ತುತ 16 ಟೆಂಡರ್ ಕಂ ಹರಾಜು ಮೂಲಕ ಮಂಜೂರು ಮಾಡಿರುವ ಮತ್ತು 03 ಸರ್ಕಾರಿ ಕಾಮಗಾರಿಗಳಿಗೆ ಮಂಜೂರು ಮಾಡಲಾಗಿರುವ ಮರಳು ಗಣಿ ಗುತ್ತಿಗೆಗಳ |

| | | |
|---|---|---|
| | | ಚಾಲ್ತಿಯಲ್ಲಿದ್ದು, ಸದರಿ ಮರಳು ಗಣಿ ಗುತ್ತಿಗೆಗಳಿಂದ 4,07,697 ಮೆಟ್ರಿಕ್ ಟನ್ ಪ್ರಮಾಣದ ಮರಳು ಗಣಿಗಾರಿಕೆಗೆ ಲಭ್ಯವಿದ್ದು, 34,805 ಮೆಟ್ರಿಕ್ ಟನ್ ಮರಳನ್ನು ಉತ್ಪಾದಿಸಿ ಸಾಗಾಣಿಕೆ ಮಾಡಲಾಗಿರುತ್ತದೆ.<br>➢ ಜಿಲ್ಲೆಯಲ್ಲಿ 16 ಎಂ-ಸ್ಯಾಂಡ್ ಉತ್ಪಾದನೆ ಸ್ಟೋನ್ ಕ್ರಷರ್ ಘಟಕಗಳಿದ್ದು, ಸದರಿ ಘಟಕಗಳಿಂದ 2024-25 ನೇ ಸಾಲಿನಲ್ಲಿ 1,16,741 ಮೆಟ್ರಿಕ್ ಟನ್ ಹಾಗೂ 2025-26ನೇ ಸಾಲಿನ ಜುಲೈ ಅಂತ್ಯದವರೆಗೆ 1,34,706 ಮೆಟ್ರಿಕ್ ಟನ್ ಪ್ರಮಾಣದ ಎಂ-ಸ್ಯಾಂಡ್ ನ್ನು ಉತ್ಪಾದನೆ ಮಾಡಿ ಸರಬರಾಜು ಮಾಡಲಾಗಿರುತ್ತದೆ.<br>➢ ಕರಾವಳಿ ನಿಯಂತ್ರಣ ವಲಯ (CRZ) ಪ್ರದೇಶದಲ್ಲಿ ಮರಳು ದಿಬ್ಬಗಳನ್ನು ತೆರವುಗೊಳಿಸುವ ಸಂಬಂಧ ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ದಿನಾಂಕ 08.05.2023 ರಂದು ಕರಡು ಮಾರ್ಗಸೂಚಿಗಳನ್ನು ಹೊರಡಿಸಿದೆ. ಸದರಿ ಕರಡು ಮಾರ್ಗಸೂಚಿಗಳಿಗೆ ರಾಜ್ಯ ಸರ್ಕಾರದ ಅಭಿಪ್ರಾಯವನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಸದರಿ ಕರಡು ಮಾರ್ಗಸೂಚಿಗಳನ್ನು ಭಾರತ ಸರ್ಕಾರದಿಂದ ಅಂತಿಮಗೊಳಿಸಿ, ಅಧಿಸೂಚನೆ ಜಾರಿಯಾದ ನಂತರ ಜಿಲ್ಲಾ ಸಮಿತಿಯು ನಿಯಮಾನುಸಾರ ಪರಿಶೀಲಿಸಿ ಕ್ರಮ ವಹಿಸುತ್ತದೆ. |
| ಆ | ಕೆಂಪು ಕಲ್ಲುಗಳನ್ನು ತೆಗೆಯಲು ಎಷ್ಟು ಮಂದಿಗೆ ಪರವಾನಗಿ ನೀಡಿದ್ದು, ಟನ್ ಒಂದಕ್ಕೆ ತಗಲುವ ವೆಚ್ಚ ಹಾಗೂ ಇರುವ ಬೇಡಿಕೆ ಎಷ್ಟು; ಯಾವ ಆಧಾರದಲ್ಲಿ ಕೆಂಪುಕಲ್ಲುಗಳಿಗೆ ದರವನ್ನು ನಿಗಧಿಪಡಿಸಲಾಗಿದೆ (ವಿವರ ನೀಡುವುದು); ನೆರೆಯ ರಾಜ್ಯ ಕೇರಳದಲ್ಲಿ ಇರುವ ದರಕ್ಕಿಂತ 500 ಶೇಕಡ ಇಲ್ಲಿ ಜಾಸ್ತಿ ಮಾಡಿರುವುದು ಸರಿಯೇ; | **A. ಪಟ್ಟಾ ಜಮೀನುಗಳಲ್ಲಿ ನಿಯಮ 32 ರಡಿ ಪರವಾನಗಿಗೆ ಸಂಬಂಧಿಸಿದಂತೆ:**<br>• ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಖಾಸಗಿ / ಪಟ್ಟಾ ಜಮೀನಿನಲ್ಲಿ ಕೆಎಂಎಂಸಿ ನಿಯಮಗಳು, 1994ರ ನಿಯಮ 32 ರಡಿ ಕೆಂಪು ಕಲ್ಲು ಗಣಿಗಾರಿಕೆಗೆ 19 ಲೈಸನ್ಸ್‌ಗಳನ್ನು ಮಂಜೂರು ಮಾಡಿದ್ದು, ಚಾಲ್ತಿಯಲ್ಲಿರುತ್ತವೆ.<br>• ಲೈಸೆನ್ಸ್ ಪಡೆದ ಪರವಾನಗಿದಾರರಿಂದ ಕೆಂಪುಕಲ್ಲಿಗೆ (ಲ್ಯಾಟರೈಟ್ ಬ್ರಿಕ್ಸ್) ಪ್ರತಿ ಮೆಟ್ರಿಕ್ ಟನ್ ಕೆಂಪು ಕಲ್ಲಿಗೆ ₹70/- ರಾಜಧನ ಹಾಗೂ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ಮೊತ್ತ ₹21/- ನ್ನು ವಿಧಿಸಿ ಸಂಗ್ರಹಿಸಲಾಗುತ್ತಿದೆ.<br>• ಲೈಸೆನ್ಸ್ ಪಡೆದ ಪರವಾನಗಿದಾರರು ಕೆಂಪು ಕಲ್ಲು ಉಪಖನಿಜವನ್ನು dispatched for use in cement or chemical industries or abrasive or refractory purpose (below threshold value as specified by IBM from time to time) ಗೆ ಸಾಗಾಣಿಕೆ ಮಾಡಿದಲ್ಲಿ ₹200/- ರಾಜಧನ ಮತ್ತು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ಮೊತ್ತ ₹60/- ಗಳನ್ನು ವಿಧಿಸಿ ಸಂಗ್ರಹಿಸಲಾಗುತ್ತಿದೆ.<br>**B. ಪಟ್ಟಾ ಜಮೀನುಗಳಲ್ಲಿ ನಿಯಮ 3-A(a) ಮತ್ತು 3-A(b) ರಡಿ ಕಾರ್ಯಾದೇಶಕ್ಕೆ ಸಂಬಂಧಿಸಿದಂತೆ:**<br>• ಕೆಎಂಎಂಸಿ ನಿಯಮಗಳು, 1994ರ ನಿಯಮ 3-A(a) ರಡಿ ಪಟ್ಟಾ / ಖಾಸಗಿ ಜಮೀನುಗಳಲ್ಲಿ ಲ್ಯಾಟರೈಟ್‌ನ್ನು ತೆರವುಗೊಳಿಸಲು 08 ಕಾರ್ಯಾದೇಶಗಳನ್ನು ಮಂಜೂರು ಮಾಡಿದ್ದು, ಚಾಲ್ತಿಯಲ್ಲಿರುತ್ತವೆ.<br>• ನಿಯಮ 3-A(a)ರಡಿ ಕೆಂಪು ಕಲ್ಲು ತೆಗೆದು ಸಾಗಾಣಿಕೆ ಮಾಡುವ ಪ್ರತಿ ಮೆಟ್ರಿಕ್ ಟನ್‌ಗೆ ರಾಜಧನ ₹70/-, ಹೆಚ್ಚುವರಿ ಪಾವತಿ ₹28/- ಮತ್ತು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ಮೊತ್ತ ₹7/- ನ್ನು ವಿಧಿಸಿ ಸಂಗ್ರಹಿಸಲಾಗುತ್ತಿದೆ.<br>• ಕೆಎಂಎಂಸಿ ನಿಯಮಗಳು, 1994ರ ನಿಯಮ 3-A(b) ರಡಿ ಪಟ್ಟಾ / ಖಾಸಗಿ ಜಮೀನುಗಳಲ್ಲಿ ಲ್ಯಾಟರೈಟ್‌ನ್ನು ತೆರವುಗೊಳಿಸಲು 03 ಕಾರ್ಯಾದೇಶ ಗಳನ್ನು ಮಂಜೂರು ಮಾಡಿದ್ದು, ಚಾಲ್ತಿಯಲ್ಲಿರುತ್ತವೆ.<br>• ನಿಯಮ 3-A(b) ರಡಿ ಕೆಂಪು ಕಲ್ಲು ತೆಗೆದು ಸಾಗಾಣಿಕೆ ಮಾಡುವ ಪ್ರತಿ ಮೆಟ್ರಿಕ್ ಟನ್‌ಗೆ ರಾಜಧನ ₹70/-, ಹೆಚ್ಚುವರಿ ಪಾವತಿ ₹28/- ಮತ್ತು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ಮೊತ್ತ ₹7/- ಮತ್ತು ಷೆಡ್ಯೂಲ್ II-D ಮೊತ್ತ ₹150/- ಗಳನ್ನು ವಿಧಿಸಿ ಸಂಗ್ರಹಿಸಲಾಗುತ್ತಿದೆ. |

| | | |
|---|---|---|
| | | • ಕೆಂಪು ಕಲ್ಲು ಉಪಖನಿಜದ ಬಳಕೆಗೆ ಅನುಗುಣವಾಗಿ ರಾಜಧನ ಮತ್ತು ಇತರೆ ಅನ್ವಯಿಕ ಶುಲ್ಕಗಳನ್ನು ನಿಗದಿಪಡಿಸಲಾಗಿರುತ್ತದೆ. |
| ಇ | ಕರಾವಳಿ ಭಾಗದಲ್ಲಿ ಮರಳಿನ ಅಭಾವದಿಂದ ಕಾಮಗಾರಿಗಳು ನಡೆಯದೇ ಇರುವುದರಿಂದ ಈ ಬಗ್ಗೆ ಪ್ರತ್ಯೇಕ ನೀತಿಯೊಂದನ್ನು ಜಾರಿಗೊಳಿಸಿ, ಅಕ್ರಮ ವ್ಯವಹಾರವನ್ನು ಸಕ್ರಮ ಗೊಳಿಸಲು ಸರ್ಕಾರ ಯಾವುದೇ ನಿರ್ಧಾರ ತೆಗೆದುಕೊಳ್ಳದೆ ಇರಲು ಕಾರಣವೇನು? | ➢ ದಿನಾಂಕ 01-12-2021 ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2021ನ್ನು ಜಾರಿಗೊಳಿಸಲಾಗಿರುತ್ತದೆ.<br>➢ ಸದರಿ ತಿದ್ದುಪಡಿ ನಿಯಮ 31-ZA ರಲ್ಲಿ ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾಣೆ ಮಂತ್ರಾಲಯದ O.M ಸಂಖ್ಯೆ 11-83/2005-IA-III (Vol-III), ದಿನಾಂಕ:08.11.2011ರ ಆದೇಶದಂತೆ, ಕರಾವಳಿ ಜಿಲ್ಲೆಗಳ ಕರಾವಳಿ ನಿಯಂತ್ರಣ ವಲಯ(CRZ) ಪ್ರದೇಶಗಳಲ್ಲಿ ಮರಳು ದಿಬ್ಬಗಳನ್ನು ತೆರವುಗೊಳಿಸಲು ಸಾಂಪ್ರದಾಯಿಕ ಮರಳು ತೆಗೆಯುವ ವ್ಯಕ್ತಿ / ಸಮುದಾಯದವರಿಗೆ ಅವಕಾಶ ನೀಡಿ ನಿಯಮ ರೂಪಿಸಲಾಗಿರುತ್ತದೆ.<br>➢ ತಿದ್ದುಪಡಿ ನಿಯಮ 31-ZB ರಲ್ಲಿ ಕರಾವಳಿ ಜಿಲ್ಲೆಗಳ ಕರಾವಳಿ ನಿಯಂತ್ರಣ ವಲಯ ಹೊರತುಪಡಿಸಿದ (Non CRZ) ಉನ್ನತ ಶ್ರೇಣಿಯ ಹಳ್ಳ / ನದಿ ಪಾತ್ರಗಳ ವ್ಯಾಪ್ತಿಯಲ್ಲಿ ಗುರುತಿಸುವ ಮರಳು ಬ್ಲಾಕ್ ಗಳನ್ನು ಜಿಲ್ಲೆಯ ಸಾಂಪ್ರದಾಯಿಕ ಮರಳು ತೆಗೆಯುವ ಸಮುದಾಯದವರಿಗೆ ಟೆಂಡರ್-ಕಂ-ಹರಾಜು ಮೂಲಕ ಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.<br>➢ ಕರಾವಳಿ ಜಿಲ್ಲೆಯ ಸಾಂಪ್ರದಾಯಿಕ ಮರಳು ತೆಗೆಯುವ ವ್ಯಕ್ತಿ / ಸಮುದಾಯದವರಿಗೆ ಜಿಲ್ಲಾ ವ್ಯಾಪ್ತಿಯ ಮರಳು ತೆಗೆಯುವ ಎಲ್ಲಾ ಮೂಲಗಳಾದ ಉನ್ನತ ಶ್ರೇಣಿಯ ಹಳ್ಳ/ನದಿ ಪಾತ್ರಗಳಲ್ಲಿ, ಕಿಂಡಿ ಅಣೆಕಟ್ಟು ಪ್ರದೇಶಗಳಲ್ಲಿ ಮತ್ತು CRZ ನದಿ ಪಾತ್ರದ ಮರಳು ದಿಬ್ಬಗಳಲ್ಲಿ ದೊರೆಯುವ ಮರಳನ್ನು ತೆಗೆದು ವಿಲೇವಾರಿ ಮಾಡಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.<br>➢ ಈ ಹಿನ್ನೆಲೆಯಲ್ಲಿ, ಕರಾವಳಿ ಜಿಲ್ಲೆಗಳಿಗೆ ಪ್ರತ್ಯೇಕ ಮರಳು ನೀತಿ ಜಾರಿಗೊಳಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ. |
| ಈ | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಗಣಿ ಇಲಾಖೆಯಲ್ಲಿ ವ್ಯಾಪಕವಾಗಿ ಭ್ರಷ್ಟಾಚಾರ ನಡೆಯುತ್ತಿದ್ದರೂ, ಅಧಿಕಾರಿಗಳು ಜೈಲುವಾಸ ಅನುಭವಿಸಿದ ನಂತರ ಬಿಡುಗಡೆಯಾಗಿ ಮತ್ತು ಉಪ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದು, ಕ್ರಮ ಕೈಗೊಳ್ಳದೇ ಇರಲು ಕಾರಣಗಳೇನು; | ದಕ್ಷಿಣ ಕನ್ನಡ ಜಿಲ್ಲೆಯ ಹಿರಿಯ ಭೂವಿಜ್ಞಾನಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅಧಿಕಾರಿಯವರು ಮಾನ್ಯ ಲೋಕಾಯುಕ್ತದಿಂದ ಟ್ರ್ಯಾಪ್‌ಗೆ ಒಳಗಾದ ಹಿನ್ನೆಲೆಯಲ್ಲಿ, ಸರ್ಕಾರವು ಆದೇಶ ಸಂಖ್ಯೆ: ಸಿಐ 108 ಎಂಜಿಎಸ್ 2025, ದಿನಾಂಕ 21-06-2025 ರಂದು ಸದರಿಯವರನ್ನು ಸೇವೆಯಿಂದ ಅಮಾನತ್ತುಗೊಳಿಸಿ, ಹಿರಿಯ ಭೂವಿಜ್ಞಾನಿ, ದಕ್ಷಿಣ ಕನ್ನಡ ಜಿಲ್ಲೆ ಹುದ್ದೆಯ ಪ್ರಭಾರವನ್ನು ಬೇರೆ ಹಿರಿಯ ಭೂವಿಜ್ಞಾನಿ ರವರಿಗೆ ಹೆಚ್ಚುವರಿಯಾಗಿ ವಹಿಸಲಾಗಿರುತ್ತದೆ. |
| ಉ | ಈ ಜಿಲ್ಲೆಗಳಲ್ಲಿ ಗಣಿ ಇಲಾಖೆಯಿಂದ ನೀಡಲ್ಪಡುವ ಪರವಾನಗಿ ಸರಿಯಾಗಿ ನೀಡದೇ ಸರ್ಕಾರದ ಬೊಕ್ಕಸಕ್ಕೆ ಸೇರಬೇಕಾದ ಆದಾಯವು ವಿಪರೀತವಾಗಿ | ಸರ್ಕಾರದ ತೆಗೆದುಕೊಂಡ ಕ್ರಮ ಈ ಕೆಳಕಂಡಂತಿವೆ:-<br>➢ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಗಣಿಗಾರಿಕೆ ಸಂಬಂಧ ನಿಯಮಾನುಸಾರ ಗುತ್ತಿಗೆ / ಲೈಸೆನ್ಸ್ / ಕಾರ್ಯಾದೇಶಗಳನ್ನು ನೀಡಲಾಗುತ್ತಿದೆ.<br>➢ ಆದಾಗ್ಯೂ ಸದರಿ ಜಿಲ್ಲೆಗಳಲ್ಲಿ ಅನಧಿಕೃತ ಉಪಖನಿಜ ಗಣಿಗಾರಿಕೆ, ಸಾಗಾಣಿಕೆ ಮತ್ತು ದಾಸ್ತಾನು ಕಂಡುಬಂದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಅದರಂತೆ, ಕಳೆದ 03 ವರ್ಷಗಳಲ್ಲಿ ದಾಖಲು ಮಾಡಿದ ಪ್ರಕರಣಗಳ ವಿವರ ಹಾಗೂ ಸಂಗ್ರಹಿಸಿದ ದಂಡದ ಮೊತ್ತದ ವಿವರ ಕೆಳಕಂಡಂತಿದೆ: |

ನಷ್ಟಗೊಳ್ಳುತ್ತಿರುವುದರ ಬಗ್ಗೆ ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು)

**ದಕ್ಷಿಣ ಕನ್ನಡ ಜಿಲ್ಲೆ**

| ಕ್ರ. ಸಂ | ವರ್ಷ | ದಾಖಲಿಸಿದ ಪ್ರಕರಣಗಳ ಸಂಖ್ಯೆ | ಸಂಗ್ರಹಿಸಿದ ದಂಡದ ಮೊತ್ತ (₹ಲಕ್ಷಗಳಲ್ಲಿ) |
|---|---|---|---|
| 1 | 2022-23 | 9 | 359.00 |
| 2 | 2023-24 | 39 | 297.00 |
| 3 | 2024-25 | 125 | 116.00 |
| **ಒಟ್ಟು** | | **173** | **772.00** |

**ಉಡುಪಿ ಜಿಲ್ಲೆ**

| ಕ್ರ. ಸಂ. | ವರ್ಷ | ದಾಖಲಿಸಿದ ಪ್ರಕರಣಗಳ ಸಂಖ್ಯೆ | ಸಂಗ್ರಹಿಸಿದ ದಂಡದ ಮೊತ್ತ (₹ಲಕ್ಷಗಳಲ್ಲಿ) |
|---|---|---|---|
| 1 | 2022-23 | 6 | 143.00 |
| 2 | 2023-24 | 8 | 127.00 |
| 3 | 2024-25 | 26 | 166.00 |
| **ಒಟ್ಟು** | | **40** | **436.00** |

ಊ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಜಲ್ಲಿ ಕ್ರಷರ್‌ಗಳಿಗೆ ಪರವಾನಗಿ ನೀಡಲಾಗಿದೆ; ಎಷ್ಟು ಅಧಿಕೃತ ಮತ್ತು ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ಕ್ರಷರ್‌ಗಳ ಸಂಖ್ಯೆ ಎಷ್ಟು; ಸರ್ಕಾರಿ ಭೂಮಿಯಲ್ಲಿ ಎಷ್ಟು ಕ್ರಷರ್‌ಗಳನ್ನು ನಡೆಸಲು ಪರವಾನಗಿ ನೀಡಲಾಗಿದೆ; ಇದರಿಂದ ಸರ್ಕಾರಕ್ಕೆ ಬರುವ ಆದಾಯ ಎಷ್ಟು; ಯಾರ ಯಾರ ಹೆಸರಿನಲ್ಲಿ ಕ್ರಷರ್ ಗಳಿವೆ; ಕರಾವಳಿಗೆ ಪ್ರತ್ಯೇಕ ಮರಳು ಮತ್ತು ಕೆಂಪು ಕಲ್ಲು ಗಣಿಗಾರಿಕೆ ನೀತಿಯನ್ನು ಜಾರಿಗೊಳಿಸಲು ಸರ್ಕಾರ ಕ್ರಮಕೈಗೊಳ್ಳದೇ ಇರಲು ಕಾರಣವೇನು? (ವಿವರ ನೀಡುವುದು)

- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಟ್ಟಾ ಜಮೀನುಗಳಲ್ಲಿ 42, ಸ್ಟೋನ್ ಕ್ರಷರ್ ಲೈಸೆನ್ಸ್ ಸರ್ಕಾರಿ ಜಮೀನುಗಳಲ್ಲಿ 22 ಸ್ಟೋನ್ ಕ್ರಷರ್ ಲೈಸೆನ್ಸ್ ಗಳು ಸೇರಿದಂತೆ ಒಟ್ಟು 64 ಲೈಸೆನ್ಸ್ ಗಳನ್ನು ಮಂಜೂರು ಮಾಡಲಾಗಿರುತ್ತದೆ. ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ಕ್ರಷರ್‌ಗಳು ಇರುವುದಿಲ್ಲ. ಸ್ಟೋನ್ ಕ್ರಷರ್ ಲೈಸೆನ್ಸ್ ದಾರರ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
- ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು- 1994ರಂತೆ, ಕಲ್ಲುಗಣಿ ಗುತ್ತಿಗೆದಾರರಿಂದ ರಾಜಧನ ಪಾವತಿಯಾಗಿರುವ ಹಿನ್ನೆಲೆಯಲ್ಲಿ ಕ್ರಷರ್ ಘಟಕದ ಮಾಲೀಕರಿಂದ ರಾಜಧನ ಸಂಗ್ರಹಿಸುತ್ತಿರುವುದಿಲ್ಲ.
- ಕ್ರಷರ್ ಘಟಕದಲ್ಲಿ ಬಳಕೆ ಮಾಡುವ ಕಚ್ಚಾ ಕಟ್ಟಡ ಕಲ್ಲಿಗೆ ಕಲ್ಲುಗಣಿ ಗುತ್ತಿಗೆದಾರರಿಂದ ರಾಜಧನ ಪಾವತಿಯಾಗಿರುವ ಉಪಖನಿಜವನ್ನು ಕ್ರಷರ್ ಘಟಕದ ಮಾಲೀಕರುಗಳು ಖರೀದಿಸಿ, ಸ್ಟೋನ್ ಕ್ರಷರ್ ಘಟಕದಲ್ಲಿ ಸಂಸ್ಕರಿಸಿದ ಕಟ್ಟಡ ಕಲ್ಲಿನ ಉತ್ಪನ್ನಗಳನ್ನು ಸೆಕೆಂಡರಿ ಖನಿಜ ರವಾನೆ ಪರವಾನಿಗೆ ಪಡೆದು ಸಾಗಾಣಿಕೆ ಮಾಡಬೇಕಾಗಿರುತ್ತದೆ.
- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ 02 ವರ್ಷಗಳಲ್ಲಿ ಕಟ್ಟಡ ಕಲ್ಲುಗಣಿಗಾರಿಕೆಯಿಂದ ಸರ್ಕಾರಕ್ಕೆ ಸಂದಾಯವಾಗಿರುವ ರಾಜಧನದ ವಿವರ ಕೆಳಕಂಡಂತಿದೆ:

| ಕ್ರ. ಸಂ. | ವರ್ಷ | ಸಂಗ್ರಹವಾದ ರಾಜಧನ (₹ಲಕ್ಷಗಳಲ್ಲಿ) |
|---|---|---|
| 1 | 2023-24 | 1628.00 |
| 2 | 2024-25 | 1527.00 |

- ಕರಾವಳಿ ಜಿಲ್ಲೆಯ ಸಾಂಪ್ರದಾಯಿಕ ಮರಳು ತೆಗೆಯುವ ವ್ಯಕ್ತಿ / ಸಮುದಾಯದವರಿಗೆ ಜಿಲ್ಲಾ ವ್ಯಾಪ್ತಿಯ ಮರಳು ತೆಗೆಯುವ ಎಲ್ಲಾ ಮೂಲಗಳಾದ ಉನ್ನತ ಶ್ರೇಣಿಯ ಹಳ್ಳ/ನದಿ ಪಾತ್ರಗಳಲ್ಲಿ, ಕಿಂಡಿ ಅಣೆಕಟ್ಟು ಪ್ರದೇಶಗಳಲ್ಲಿ ಮತ್ತು CRZ ನದಿ ಪಾತ್ರದ ಮರಳು ದಿಬ್ಬಗಳಲ್ಲಿ ದೊರೆಯುವ ಮರಳನ್ನು ತೆಗೆದು ವಿಲೇವಾರಿ ಮಾಡಲು ಅವಕಾಶವನ್ನು ನೀಡಿದ್ದು, ಕರಾವಳಿ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ಮರಳು ನೀತಿ ಜಾರಿಗೊಳಿಸುವ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.

ಸಂಖ್ಯೆ ಸಿಐ -ಎಂಎಂಎನ್/200/2025

S. S. -Kovin

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.

ಅನುಬಂಧ-

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಟೋನ್ ಕ್ರಷರ್ ಕಾರ್ಯಾಚರಣೆಗೆ ಲೈಸೆನ್ಸ್ ಮಂಜೂರು ಮಾಡಿರುವ ವಿವರ

| ಕ್ರ.ಸಂ | ಸ್ಟೋನ್ ಕ್ರಷರ್ ಮಾಲಿಕರ ಹೆಸರು | ಸ್ಟೋನ್ ಕ್ರಷರ್ ಲೈಸೆನ್ಸ್ ಸಂಖ್ಯೆ | ತಾಲ್ಲೂಕು | ಗ್ರಾಮ | ಸರ್ವೆ ನಂಬರ್ | ವಿಸ್ತೀರ್ಣ (ಎಕರೆಗಳಲ್ಲಿ) | ಜಮೀನಿನ ವಿಧ | ಲೈಸೆನ್ಸ್ ನೀಡಿದ ದಿನಾಂಕ | ಲೈಸೆನ್ಸ್ ಅವಧಿ ಮುಕ್ತಾಯವಾಗುವ ದಿನಾಂಕ |
|---|---|---|---|---|---|---|---|---|---|
| 1 | ಕೊವೆಲ್ ಅಹಮ್ಮದ್ ಹಾಜಿ | SCL 13 | ಬಂಟ್ವಾಳ | ಸಜಿಪಮೂಡ | 283/1ಎ2 | 1.00 | ಪಟ್ಟಾ | 09-02-2015 | 31-03-2035 |
| 2 | ಮೆ\|\| ವಿಠಲ್ ಅಗ್ರಿಗೇಟ್ಸ್ (ಮೆ\|\| ಪಿ.ಬಿ.ಗ್ರಾನೈಟ್ಸ್) | SCL 20 | ಬಂಟ್ವಾಳ | ವೀರಕಂಬ | 28/3ಪಿ, 28/4ಪಿ | 1.00 | ಪಟ್ಟಾ | 08-05-2015 | 31-03-2035 |
| 3 | ಮೆ\|\| ಸಂತೋಷ್ ಇಂಡಸ್ಟ್ರೀಸ್, ಪ್ರೊ ಸಂತೋಷ್ ಮಿನೆಜಸ್ | SCL 21 | ಬಂಟ್ವಾಳ | ವಿಟ್ಲಮುಡ್ನೂರು | 178 | 2.00 | ಪಟ್ಟಾ | 23-04-2015 | 31-03-2035 |
| 4 | ಮೆ\|\| ಬಿ.ಎ ಕ್ರಷರ್ ಇಂಡಸ್ಟ್ರೀಸ್, ಶ್ರೀಮತಿ ಮರಿಯಮ್ಮ | SCL 24 | ಬಂಟ್ವಾಳ | ಪುಣಚ | 65/1ಬಿ,65 /2ಬಿ, 749/1, 749/2 | 1.00 | ಪಟ್ಟಾ | 14-09-2015 | 31-03-2035 |
| 5 | ಮೆ\|\| ಸೌಪರ್ಣಿಕ ಟ್ರೇಡಿಂಗ್ ಕಂ., ಶ್ರೀ ಪಿ.ವಿ. ಮನೋಜ್ | SCL 27 | ಬಂಟ್ವಾಳ | ಕೇಪು | 4/1ಪಿ1, 4/1, 4/5ಪಿ | 1.00 | ಪಟ್ಟಾ | 14-09-2015 | 31-03-2035 |

| | | | | | | | | | |
|---|---|---|---|---|---|---|---|---|---|
| 6 | ಮೆ॥ ಟಿ.ಎಸ್.ಎನ್. ಅಸೋಸಿಯೇಟ್ಸ್ & ಇಂಡಸ್ಟ್ರೀಸ್, ಶ್ರೀ ತಿಮ್ಮಪ್ಪ ಎಸ್ ನಾಯ್ಕ | SCL 28 | ಬಂಟ್ವಾಳ | ಇರ್ವತ್ತೂರು | 76/ಪಿ2 | 1.00 | ಪಟ್ಟಾ | 14-09-2015 | 31-03-2035 |
| 7 | ಮೆ॥ ಡಿ'ಕೋಸ್ತ ಜೆಲ್ಲಿ ಕ್ರಷರ್, ಶ್ರೀ ಅಬ್ದುಲ್ಲ ಕುನ್ಹಿ | SCL 30 | ಬಂಟ್ವಾಳ | ಚನ್ನೈತೋಡಿ | 47/ಪಿ2 | 1.00 | ಪಟ್ಟಾ | 26-10-2015 | 31-03-2035 |
| 8 | ಮೆ॥ ಕಜೆಕಾರ್ ಸ್ಟೋನ್ ಕ್ರಷರ್ಸ್, ಶ್ರೀ ಕೆ. ಹಾರೂನ್ | SCL 34 | ಬಂಟ್ವಾಳ | ತೆಂಕಕಜೆಕಾರು | 30/3 | 1.35 | ಪಟ್ಟಾ | 16-02-2016 | 31-03-2036 |
| 9 | ಮೆ॥ ಎನ್.ಎಸ್. ಕ್ರಷರ್ & ಹಾಲೋ ಬ್ಲಾಕ್ ಇಂಡಸ್ಟ್ರೀಸ್, ಶ್ರೀ ಅಬ್ದುಲ್ಲ ಕುನ್ಹಿ | SCL 39 | ಬಂಟ್ವಾಳ | ವಿಟ್ಲಮುಡ್ನೂರು | 366/3 | 1.00 | ಪಟ್ಟಾ | 02-05-2016 | 31-03-2036 |
| 10 | ಮೆ॥ ಎನ್.ಎಸ್.ಎನ್. ಇಂಡಸ್ಟ್ರೀಸ್, ಶ್ರೀ ನವೀನ್ ಕಾಸಿಯಾನ್ | SCL 40 | ಬಂಟ್ವಾಳ | ಪಿಲಿಮೊಗ್ರು | 20 | 1.00 | ಪಟ್ಟಾ | 25-05-2016 | 31-03-2036 |
| 11 | ಮೆ॥ ಬಿ.ಎ ಎಂಟರ್ ಪ್ರೈಸಸ್, ಶ್ರೀಮತಿ ಮರಿಯಮ್ಮ | SCL 47 | ಬಂಟ್ವಾಳ | ವಿಟ್ಲಮುಡ್ನೂರು | 338/4 | 1.00 | ಪಟ್ಟಾ | 21-07-2016 | 31-03-2036 |
| 12 | ಮೆ॥ ನೀಲಗಿರಿ ಕ್ರಷರ್ & ಸ್ಟೋನ್ ಇಂಡಸ್ಟ್ರೀಸ್, ಎ ಅಬ್ದುಲ್ಲಾ | SCL 50 | ಬಂಟ್ವಾಳ | ಕರೋಪಾಡಿ | 508/1 | 1.00 | ಪಟ್ಟಾ | 21-09-2017 | 31-03-2037 |

| | | | | | | | | | |
|---|---|---|---|---|---|---|---|---|---|
| 13 | ಮೆ\|\| ಪದ್ಮಾಂಬಿಕ ಗ್ರಾನೈಟ್ಸ್, ಶ್ರೀ ಬಿ ಪದ್ಮಶೇಕರ್ ಕುಮಾರ್ | SCL 58 | ಬಂಟ್ವಾಳ | ಕಾವಳಮುಡೂರು | 268/5, 268/6 & 268/7 | 1.90 | ಪಟ್ಟಾ | 27-12-2018 | 31-03-2037 |
| 14 | ಮೆ\|\| ವಿಜಯವಾಹಿನಿ ಎಂಟರ್ ಪ್ರೈಸಸ್, ಶ್ರೀ ಮೋಹನ್ ಅಮಿನ್ | SCL 31 | ಬಂಟ್ವಾಳ | ಪುದು | 1/1ಇ1 | 2.00 | ಸರ್ಕಾರಿ | 17-10-2015 | 31-03-2035 |
| 15 | ಮೆ\|\| ವಿಜಯಲಕ್ಷ್ಮಿ ಜಲ್ಲಿ ಕ್ರಷರ್ ಶ್ರೀಮತಿ ಬೇಬಿ ರಾಘವ | SCL 33 | ಬಂಟ್ವಾಳ | ವಿಟ್ಲಮುಡ್ನೂರು | 239/ಪಿ1 | 1.00 | ಸರ್ಕಾರಿ | 24-11-2015 | 31-03-2035 |
| 16 | ಮೆ\|\| ಟಿ.ಎಸ್.ಎನ್. ಅಸೋಸಿಯೇಟ್ಸ್ & ಇಂಡಸ್ಟ್ರೀಸ್, ಶ್ರೀ ತಿಮ್ಮಪ್ಪ ಎಸ್ ನಾಯ್ಕ | SCL 49 | ಬಂಟ್ವಾಳ | ಎಲಿಯನಡುಗೋಡು | 39/ಪಿ2 | 1.00 | ಸರ್ಕಾರಿ | 21-09-2017 | 31-03-2037 |
| 17 | ಮೆ\|\| ಸಾಯಿರಾಂ ಕ್ರಷಿಂಗ್ ಇಂಡಸ್ಟ್ರೀಸ್, ಶ್ರೀ ನರೇಂದ್ರ ರೈ | SCL 53 | ಬಂಟ್ವಾಳ | ಅನಂತಾಡಿ | 122 | 2.38 | ಸರ್ಕಾರಿ | 21-09-2017 | 31-03-2037 |
| 18 | ಶ್ರೀ ಮರ್ವಿನ್ ಎಂ.ಗೋವಿಯಸ್ | SCL 60 | ಬಂಟ್ವಾಳ | ಕಾವಳಪಡೂರು | 121/2ಪಿ1 | 1.00 | ಸರ್ಕಾರಿ | 01-02-2019 | 31-03-2039 |
| 19 | ಮೆ\|\| ಪೆರಿಯಾರ್ ಕ್ರಷರ್ ಇಂಡಸ್ಟ್ರೀಸ್, ಪ್ರೊ. ಶ್ರೀ ಮನ್ಮಥರಾಜ್ ಜೈನ್ | SCL 66 | ಬಂಟ್ವಾಳ | ದೇವಸ್ಯಪಡೂರು | 166/1 | 2.00 | ಪಟ್ಟಾ | 15-04-2021 | 31-03-2041 |

| | | | | | | | | | |
|---|---|---|---|---|---|---|---|---|---|
| 20 | ಮೆ|| ವಿಜಯ ಗ್ರಾನೈಟ್ಸ್, ಶ್ರೀ ಸಂಜಯ್ ನರೋನ್ಹ | SCL 67 | ಬಂಟ್ವಾಳ | ಅನಂತಾಡಿ | 4/ಪಿ2, 13/5ಪಿ2 | 1.20 | ಸರ್ಕಾರಿ & ಪಟ್ಟಾ | 14-09-2021 | 31-03-2041 |
| 21 | ಮೆ|| ವಿ2 ಅಸೋಸಿಯೇಟ್ಸ್, ಪ್ರ. ಶ್ರೀ ರವಿಕುಮಾರ್ ಪೂಜಾರಿ | SCL 68 | ಬಂಟ್ವಾಳ | ದೇವಸ್ಯಪಡೂರು | 166/3 | 1.00 | ಪಟ್ಟಾ | 09-03-2022 | 31-03-2042 |
| 22 | ಮೆ|| ದುರ್ಗಾ ಸ್ಟೋನ್ಸ್ & ಕ್ರಷರ್ಸ್, ಶ್ರೀ ರವಿಕುಮಾರ್ ಪೂಜಾರಿ | SCL 69 | ಬಂಟ್ವಾಳ | ಮೇರಮಜಲು | 116/6 | 1.00 | ಪಟ್ಟಾ | 15-09-2022 | 31-03-2042 |
| 23 | ಮೆ|| ಹೇಮ ಗ್ರಾನೈಟ್ಸ್, ಪ್ರೊ. ಹೇಮಂತ್ ಕುಮಾರ್ | SCL 74 | ಬಂಟ್ವಾಳ | ಕಾವಳಮುಡೂರು | 171/4ಪಿ2 | 1.00 | ಸರ್ಕಾರಿ | 12-03-2024 | 31-03-2044 |
| 24 | ಮೆ|| ಅಲ್ ಬದ್ರಿಯ ಇಂಡಸ್ಟ್ರೀಸ್, ಪ್ರೊ. ಎ ಎಂ ಇಸ್ಮಾಯಿಲ್ | SCL 72 | ಬಂಟ್ವಾಳ | ಕರೋಪಾಡಿ | 455/1 | 1.00 | ಸರ್ಕಾರಿ | 06-03-2024 | 31-03-2044 |
| 25 | ಮೆ|| ಪಂಜಿಕಲ್ಲು ಸ್ಟೋನ್ ಇಂಡಸ್ಟ್ರೀಸ್, ಪ್ರೊ. ಜಿತೇಂದ್ರಕುಮಾರ್ | SCL 48 | ಬಂಟ್ವಾಳ | ಪಂಜಿಕಲ್ಲು | 18/1 | 1.00 | ಪಟ್ಟಾ | 21-09-2017 | 31-03-2037 |
| 26 | ಮೆ|| ವಿಜಯಲಕ್ಷ್ಮಿ ಸ್ಟೋನ್ ಕ್ರಷರ್, ಪ್ರೊ. ಬೇಬಿ ರಾಘವ | SCL 61 | ಬಂಟ್ವಾಳ | ವಿಟ್ಲಮುಡ್ನೂರು | 239/ಪಿ1 | 3.50 | ಸರ್ಕಾರಿ | 01-02-2019 | 31-03-2039 |

| | | | | | | | | | |
|---|---|---|---|---|---|---|---|---|---|
| 27 | ಮೆ|| ದುರ್ಗಾಂಬ ಕನ್ಸ್ ಟ್ರಕ್ಷನ್, ಶ್ರೀ ಎನ್, ಸಂತೋಷ್ ಕುಮಾರ್ ಶೆಟ್ಟಿ | SCL 38 | ಬೆಳ್ತಂಗಡಿ | ಅಂಡಿಂಜೆ | 3/17, 8,18 | 1.50 | ಪಟ್ಟಾ | 02-05-2016 | 31-03-2036 |
| 28 | ಶ್ರೀ ಡಿ. ಹರ್ಷೇಂದ್ರ ಕುಮಾರ್ | SCL 01 | ಬೆಳ್ತಂಗಡಿ | ಅಂಡಿಂಜೆ | 121/1ಬಿ, 121/2 | 1.50 | ಪಟ್ಟಾ | 10-12-2014 | 31-03-2033 |
| 29 | ಮೆ|| ಸೋಮನಾಥ ಗ್ರಾನೈಟ್ಸ್, ಪ್ರೊ. ಶ್ರೀ ಸೂರ್ಯನಾರಾಯಣ ಭಟ್ | SCL 48 | ಬೆಳ್ತಂಗಡಿ | ಮಚ್ಚಿನ | 85/1, 85/7 | 1.00 | ಪಟ್ಟಾ | 08-06-2017 | 31-03-2027 |
| 30 | ಮೆ|| ಹಿಂದುಸ್ಥಾನ್ ಕ್ರಷರ್ಸ್ | SCL 48 | ಬೆಳ್ತಂಗಡಿ | ಪುದುವೆಟ್ಟು | 120/ಪಿ1 | 2.00 | ಸರ್ಕಾರಿ | 15-06-2016 | 31-03-2036 |
| 31 | ಮೆ|| ಶ್ರೀ ಕೃಷ್ಣ ಎಂಟರ್ ಪ್ರೈಸಸ್, ಪಾರ್ಟನರ್ ಶ್ರೀ ರಕ್ಷಣ್ ಮೆಲಾಂಟ | SCL 62 | ಬೆಳ್ತಂಗಡಿ | ಆರಂಬೋಡಿ | 230/3 | 1.00 | ಪಟ್ಟಾ | 01-02-2019 | 31-03-2038 |
| 32 | ಮೆ|| ತುರ್ಕಳಿಕೆ ಸ್ಟೋನ್ ಕ್ರಷರ್, ಪ್ರೊ. ಪಿ ವಿ ಅನ್ವರ್ | SCL 57 | ಬೆಳ್ತಂಗಡಿ | ಕರಾಯ | 28/1ಪಿ1 | 1.60 | ಸರ್ಕಾರಿ | 11-10-2018 | 31-03-2038 |
| 33 | ಚಂದ್ರಹಾಸ ಟಿ ಅಮೀನ್, ಸಿ.ಟಿ.ಎ ಗ್ರಾನೈಟ್ ಕ್ರಷರ್ | SCL 05 | ಮಂಗಳೂರು | ಕಂದಾವರ | 1/1ಎ1 | 2.28 | ಪಟ್ಟಾ | 14-01-2015 | 31-03-2034 |

| | | | | | | | | | |
|---|---|---|---|---|---|---|---|---|---|
| 34 | ಎನ್. ದಿನೇಶ್ ಶೆಟ್ಟಿ, ಭೂಮಿಕಾ ಗ್ರಾನೈಟ್ಸ್ | SCL 11 | ಮಂಗಳೂರು | ಬಡಗ ಎಡಪದವು | 270/4,5 | 1.86 | ಪಟ್ಟಾ | 09-02-2015 | 31-03-2035 |
| 35 | ಮೆ\|\| ಕೆ.ಎನ್.ಆರ್. ಕನ್ಸ್ ಟ್ರಕ್ಷನ್ಸ್ | SCL 22 | ಮಂಗಳೂರು | ತೆಂಕ ಎಡಪದವು | 67/10, 67/11, | 1.01 | ಪಟ್ಟಾ | 30-06-2015 | 31-03-2035 |
| 36 | ಮೆ\|\| ಜುಗಲ್ ಪೌಲ್ ಸಲ್ದಾನ ಸ್ಟೋನ್ ಕ್ರಷರ್ಸ್, ಶ್ರೀ ಜುಗಲ್ ಪೌಲ್ ಸಲ್ದಾನ | SCL 37 | ಮಂಗಳೂರು | ಬೊಂಡಂತಿಲ | 121 | 1.00 | ಪಟ್ಟಾ | 02-05-2016 | 31-03-2036 |
| 37 | ಮೆ\|\| ಫಾಲ್ಕನ್ ಟ್ರೇಡರ್ಸ್, ಶ್ರೀ ಅಬ್ದುಲ್ ಗಫೂರ್ | SCL 42 | ಮಂಗಳೂರು | ತೆಂಕ ಎಡಪದವು | 178/1ಎ2, 135/2ಸಿ | 2.00 | ಪಟ್ಟಾ | 23-05-2016 | 31-03-2036 |
| 38 | ಮೆ\|\| ಕಬಕ ಮೆಟಲ್ ಇಂಡಸ್ಟ್ರೀಸ್, ಶ್ರೀ ಅಬ್ದುಲ್ ರೆಹಮಾನ್ | SCL 23 | ಪುತ್ತೂರು | ಕಬಕ | 26/1ಎ1 | 2.00 | ಪಟ್ಟಾ | 13-08-2015 | 31-03-2035 |
| 39 | ಮೆ\|\| ಕಾಮತ್ ಗ್ರಾನೈಟ್ ಕ್ರಷರ್, ಶ್ರೀ ಎಂ. ಸುರೇಶ್ ಕಾಮತ್ | SCL 25 | ಪುತ್ತೂರು | ಕಬಕ | 26/1ಎ3ಪಿ 1 | 1.00 | ಸರ್ಕಾರಿ | 14-09-2015 | 31-03-2035 |
| 40 | ಮೆ\|\| ಡೆಲ್ಟ ಎಂಟರ್ ಪ್ರೈಸಸ್ | SCL 73 | ಸುಳ್ಯ | ಮರ್ಕಂಜ | 173/1ಬಿ2 ಎಪಿ1 | 1.00 | ಸರ್ಕಾರಿ | 06-03-2024 | 31-03-2043 |

| | | | | | | | | | |
|---|---|---|---|---|---|---|---|---|---|
| 41 | ಮೆ|| ಶ್ರೀ ಲಕ್ಷ್ಮೀ ಕ್ರಷಿಂಗ್ ಇಂಡಸ್ಟ್ರೀಸ್, ಶ್ರೀ ಇ.ಕೃಷ್ಣಮೂರ್ತಿ | SCL 26 | ಕಡಬ | ಹಳೆನೇರಂಕಿ | 143 | 1.00 | ಪಟ್ಟಾ | 14-09-2015 | 31-03-2035 |
| 42 | ಐತಪ್ಪ ಆಳ್ವ, ಮೆ|| ಪದ್ಮ ಎಂಟರ್ ಪ್ರೈಸಸ್ | SCL 14 | ಮೂಡಬಿದ್ರೆ | ಪಡುಕೊಣಾಜೆ | 112/2 | 1.00 | ಪಟ್ಟಾ | 09-02-2015 | 31-03-2034 |
| 43 | ಐರಿನ್ ಡಿ.ಕುನ್ಹ ಮೆ|| ಸಿ.ಎಲ್.ಆರ್ ಕ್ರಷರ್ಸ್ | SCL 15 | ಮೂಡಬಿದ್ರೆ | ನಿಡ್ಡೋಡಿ | 38/3ಬಿ | 1.00 | ಪಟ್ಟಾ | 09-02-2015 | 31-03-2034 |
| 44 | ಮೆ\|\| ಆರ್.ಕೆ.ಪೃಥ್ವಿರಾಜ್ ಸ್ಟೋನ್ ಕ್ರಷರ್. ಶ್ರೀ ಆರ್.ಕೆ. ಪೃಥ್ವಿರಾಜ್ | SCL 32 | ಮೂಡಬಿದ್ರೆ | ಇರುವೈಲು | 155/2ಪಿ5 | 1.00 | ಪಟ್ಟಾ | 28-10-2015 | 31-03-2035 |
| 45 | ಮೆ|| ಜೆ.ಎನ್.ಕ್ರಷರ್ಸ್ ಶ್ರೀ ವಿನ್ಸೆಂಟ್ ಜೋಸೆಫ್ ನೀಲಿಯಾರ್ | SCL 36 | ಮೂಡಬಿದ್ರೆ | ಕಲ್ಲಮುಂಡ್ಕೂರು | 225/1ಪಿ,2ಪಿ | 1.00 | ಪಟ್ಟಾ | 16-02-2016 | 31-03-2035 |
| 46 | ಮೆ|| ಸಿ ಎಂ ಜಾಯ್ & ಕಂ, ಶ್ರೀ ಸಿ. ಎಂ ಜಾಯ್ | SCL 64 | ಮೂಡಬಿದ್ರೆ | ಪುಚ್ಚಮೊಗ್ರು | 69/3, 69/4 | 1.60 | ಪಟ್ಟಾ | 01-07-2019 | 31-03-2039 |
| 47 | ಡಿ.ಎಸ್.ಪಿ ಎಂಟರ್ ಪ್ರೈಸಸ್, ಪ್ರೊ. ಶ್ರೀ ಶಕ್ತಿ ಪ್ರಸಾದ್ ಶೆಟ್ಟಿ | SCL 65 | ಮೂಡಬಿದ್ರೆ | ಬಡಗಮಿಜಾರು | 306/2 | 1.00 | ಪಟ್ಟಾ | 16-06-2020 | 31-03-2040 |

| | | | | | | | | | |
|---|---|---|---|---|---|---|---|---|---|
| 48 | ಆದರ್ಶ್ ಶೆಟ್ಟಿ ಮೆ\|\| ಸನ್ ಸಿರಾಮಿಕ್ಸ್ | SCL 03 | ಮೂಡಬಿದ್ರೆ | ಕಡಂದಲೆ | 318/2 | 3.72 | ಪಟ್ಟಾ | 14-01-2015 | 31-03-2034 |
| 49 | ರವೀಂದ್ರ ಶೆಟ್ಟಿ, ಶ್ರೀನಿವಾಸ ಪ್ರಸಾದ್ ಸ್ಟೋನ್ ಕ್ರಷರ್ | SCL 02 | ಮೂಡಬಿದ್ರೆ | ನೆಲ್ಲಿಕಾರು | 215/ಪಿ5 | 3.00 | ಸರ್ಕಾರಿ | 14-01-2015 | 31-03-2035 |
| 50 | ಸುಧಾಕರ ಶೆಟ್ಟಿ, ಮುಗ್ರೋಡಿ ಕ್ರಷರ್ಸ್ | SCL 04 | ಮೂಡಬಿದ್ರೆ | ನೆಲ್ಲಿಕಾರು | 216/1ಪಿ1 | 2.48 | ಸರ್ಕಾರಿ | 14-01-2015 | 31-03-2034 |
| 51 | ಮೆ\|\| ಡಿ.ಎಸ್.ಪಿ. ಎಂಟರ್ ಪ್ರೈಸಸ್, ಶಕ್ತಿ ಪ್ರಸಾದ್ ಶೆಟ್ಟಿ | SCL 70 | ಮೂಡಬಿದ್ರೆ | ಪುತ್ತಿಗೆ | 128/1ಪಿ2, 128/13ಪಿ2 | 1.00 | ಪಟ್ಟಾ | 24-11-2022 | 31-03-2042 |
| 52 | ಮೆ\|\| ಶ್ರೀ ಪೊಳಲಿ ಕ್ರಷರ್ಸ್, ಶ್ರೀ ಸಂದೇಶ್ ಪ್ರಸಾದ್ ಶೆಟ್ಟಿ | SCL 71 | ಮೂಡಬಿದ್ರೆ | ಬಡಗಮಿಜಾರು | 108/2 | 1.00 | ಪಟ್ಟಾ | 05-12-2022 | 31-03-2042 |
| 53 | ಜೆ.ಐ.ಡೋನಿ ಸುವಾರಿಸ್, ಪ್ರೊ ಮೆ\|\| ಡಿಕ್ಸನ್ ಕನ್ಸ್ ಟ್ರಕ್ಷನ್ ವರ್ಕ್ಸ್ | SCL 17 | ಮುಲ್ಕಿ | ಐಕಳ | 187/2 | 1.00 | ಪಟ್ಟಾ | 19-03-2015 | 31-03-2035 |
| 54 | ಮೆ\|\| ಸಂತೋಷ್ ಇಂಡಸ್ಟ್ರೀಸ್, ಪ್ರೊ ಸಂತೋಷ್ ಮಿನೆಜಸ್ | SCL 19 | ಮುಲ್ಕಿ | ಐಕಳ | 185/2ಪಿ2, | 1.00 | ಪಟ್ಟಾ | 23-04-2015 | 31-03-2035 |

| | | | | | | | | | |
|---|---|---|---|---|---|---|---|---|---|
| 55 | ಟಿ. ಧನಪಾಲ್, ಪ್ರೊಪ್ರೈಟರ್ ಮೆ||ವಿಜಯ ಸ್ಟೋನ್ ಕ್ರಷರ್ಸ್ | SCL 06 | ಮುಲ್ಕಿ | ಐಕಳ | 157/1ಎ1 ಪಿ3 | 1.00 | ಪಟ್ಟಾ | 09-02-2015 | 31-03-2034 |
| 56 | ಮುರುಗನ್ ಸ್ಟೋನ್ ಕ್ರಷರ್ಸ್, ಪ್ರೊ. ಶ್ರೀಮತಿ ಕಾವೇರಿ | SCL 08 | ಮುಲ್ಕಿ | ಐಕಳ | 41/1 | 2.00 | ಸರ್ಕಾರಿ | 09-02-2015 | 31-03-2035 |
| 57 | ರಾಜೀವಿ ಶೇಖರ್ ಶೆಟ್ಟಿ ಶ್ರೀ ದೇವಿ ಪ್ರಸಾದ್ ಎಂಟರ್ ಪ್ರೈಸಸ್ | SCL 09 | ಮುಲ್ಕಿ | ಐಕಳ | 41/1 | 2.00 | ಸರ್ಕಾರಿ | 09-02-2015 | 31-03-2035 |
| 58 | ವಿ. ನಟರಾಜ್, ಶ್ರೀದೇವಿ ಮುರುಗನ್ ಸ್ಟೋನ್ ಕ್ರಷರ್ಸ್ | SCL 10 | ಮುಲ್ಕಿ | ಐಕಳ | 41/1 | 2.00 | ಸರ್ಕಾರಿ | 09-02-2015 | 31-03-2035 |
| 59 | ಕ್ಲಾಡಿಯಸ್ ಎಂ.ಫೆರ್ನಾಂಡಿಸ್ ಪ್ರೊ. ಮೆ|| ಸಿ.ಎಂ ಫೆರ್ನಾಂಡಿಸ್ | SCL 16 | ಮುಲ್ಕಿ | ಐಕಳ | 226/ಪಿ | 2.00 | ಪಟ್ಟಾ | 19-03-2015 | 31-03-2035 |
| 60 | ಮೆ|| ಅಮರದೀಪ್ ಇಂಡಸ್ಟ್ರೀಸ್ ಸಂತೋಷ್ ಕುಮಾರ್ ರೈ | SCL 63 | ಉಳ್ಳಾಲ | ಕುರ್ನಾಡು | 60/1ಪಿ2 | 1.50 | ಪಟ್ಟಾ | 01-02-2019 | 31-03-2039 |
| 61 | ಮೆ|| ಶ್ರೀ ಕೃಷ್ಣ ಇಂಡಸ್ಟ್ರೀಸ್, ಶ್ರೀ ಎಂ. ರಾಮಚಂದ್ರ | SCL 35 | ಉಳ್ಳಾಲ | ಇರಾ | 294/1ಎಪಿ 1 | 1.00 | ಸರ್ಕಾರಿ | 16-02-2016 | 31-03-2036 |

| | | | | | | | | | |
|---|---|---|---|---|---|---|---|---|---|
| 62 | ಮೆ|| ಅಮರನಾಥ ಇಂಡಸ್ಟ್ರೀಸ್, ಶ್ರೀ ಸನತ್ ಸಮಿತ್ | SCL 45 | ಉಳ್ಳಾಲ | ಬಾಳೆಪುಣಿ | 48/1ಪಿ2 | 1.00 | ಸರ್ಕಾರಿ | 15-06-2016 | 31-03-2036 |
| 63 | ಮೆ|| ಶ್ರೀ ಗಣೇಶ್ ಸ್ಟೋನ್ ಕ್ರಷರ್, ಶ್ರೀ ರಮೇಶ್ ಶೇಣವ | SCL 46 | ಉಳ್ಳಾಲ | ಕುರ್ನಾಡು | 152/3ಎ | 1.00 | ಸರ್ಕಾರಿ | 15-06-2016 | 31-03-2036 |
| 64 | ಮೆ|| ವೈದ್ಯನಾಥ್ ಇಂಡಸ್ಟ್ರೀಸ್, ಶ್ರೀ ಶಿವಪ್ರಸಾದ್ ಆಳ್ವ | SCL 51 | ಉಳ್ಳಾಲ | ಬಾಳೆಪುಣಿ | 42/2ಎ | 1.00 | ಸರ್ಕಾರಿ | 21-09-2017 | 31-03-2037 |

CI-MMN-200-2025

Deputy Director (Min. Admn)
Dept. of Mines & Geology
Bangalore-560001